**ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಮಾರ್ಚ್ 3.**

**ಪಾಠ 9** **ಫೆಬ್ರವರಿ24– ಮಾರ್ಚ್ 2**

# ಕೃತಜ್ಞತೆಯ ಕಾಣಿಕೆಗಳು

ಸಬ್ಬತ್ತಿನ ಮಧ್ಯಾಹ್ನ:

ಈ ವಾರದ ಪಾಠದ ಅಧ್ಯಯನಕ್ಕಾಗಿ:ಮತ್ತಾಯ 6:19–21, ಎಫೆಸ 2:8; 1 ಪೇತ್ರನು 4:10; ಲೂಕ 7:37–47; 2 ಕೊರಿಂಥ 8:8–15; 2 ಕೊರಿಂಥ 9:6,7.

**ಸ್ಮರಣವಾಕ್ಯ:'ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.' (ಯೋಹಾನ 3:16).**

ನಮ್ಮ ದೇವರು ಕೊಡುವ ದೇವರು ಯೇಸುವಿನ ತ್ಯಾಗದಲ್ಲಿ ಈ ಸತ್ಯವನ್ನು ಶಕ್ತಿಶಾಲಿಯಾಗಿ ಕಾಣುತ್ತದೆ. ?ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.? (ಯೋಹಾನ 3:16). ಅಥವಾ ಈ ವಚನವನ್ನು ಹಾಗಾದರೆ ಕೆಟ್ಟವರಾದ ನೀವು ನಮ್ಮ ಮಕ್ಕಳಿಗೆ ಒಳ್ಳೆ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪರಿತ್ರಾತ್ಮ ವರವನ್ನು ಕೊಡುವನಲ್ಲವೇ ಅಂದನು.? ಲೂಕ 11:13)

ದೇವರು ಕೊಡುತ್ತಾನೆ ಮತ್ತು ಹೆಚ್ಚಾಗಿ ಕೊಡುತ್ತಾನೆ, ಅದು ಆತನ ಗುಣ. ಆದ್ದರಿಂದ ಆತನ ಗುಣಗಳನ್ನು ತೋರಿಸುವವರು ಕೂಡ ಆತನ ಹಾಗೆ ನೀಡುತ್ತಾರೆ. ಇದರಿಂದ ?ಸ್ವಾರ್ಥದ ಕ್ರೈಸ್ತವನನ್ನು ನೋಡುವುದು ಆತನ ಬೋಧನೆಗೆ ತದ್ವಿರುದ್ದವಾಗಿದೆ.?

ನಮಗೆ ನೀಡಲಾಗಿರುವುದನ್ನು ತಿರುಗಿ ನೀಡುವ ಒಂದು ವಿಧಾನವೆಂದರೆ ಕಾಣಿಕೆಗಳ ಮೂಲಕ. ನಮ್ಮ ಕಾಣಿಕೆಗಳು ನಮ್ಮ ಪ್ರೀತಿ ಮತ್ತು ಕೃತಜ್ಞತೆಯನ್ನು ತೋರಿಸುತ್ತವೆ. ಯೇಸುವು ಆತನ ಪರಲೋಕದ ರಾಜ್ಯದೊಳಗೆ ನಮ್ಮನ್ನು ಆಹ್ವಾನಿಸುವಾಗ ನಮ್ಮ

ಉದಾರವಾದ ಕಾಣಿಕೆಗಳ ಸಹಾಯದಿಂದ ಅನೇಕರು ಕ್ರಿಸ್ತನ ಸುವಾರ್ತೆಯನ್ನು ಅಂಗಿಕರಿಸುವ ಭಾಗ್ಯವನ್ನು ನಾವು ನೋಡುತ್ತೇವೆ.

ಈ ವಾರ ನಾವು ಕಾಣಿಕೆಗಳ ಪ್ರಮುಖವಾದ ವಿಷಯಗಳನ್ನು ನೋಡೋಣ. ನಮ್ಮ ವಸ್ತುಗಳಾಗಿರಬಹುದು, ಸಮಯ ಅಥವಾ ತಲಾಂತುಗಳನ್ನು ಉದಾರವಾಗಿ ನೀಡುವ ಮೂಲಕ ನಾವು ಸೇವೆ ಮಾಡುವ ದೇವರ ಗುಣಗಳನ್ನು ಲೋಕಕ್ಕೆ ತೋರಿಸುವ ಒಂದು ಶಕ್ತಿಶಾಲಿಯಾದ ವಿಧಾನವಾಗಿದೆ.

**ಪಾಠ 9** **ಫೆಬ್ರವರಿ24– ಮಾರ್ಚ್ 2**

**ಭಾನುವಾರ** **ಫೆಬ್ರವರಿ 25**

## "ನಿನ್ನ ಗಂಟು ಇದ್ದಲ್ಲಿಯೇ"

ಮತ್ತಾಯ 6;19–21 ನ್ನು ಓದಿರಿ. ಈ ವಚನಗಳು ನಮಗೆ ಬಹಳ ಚಿರಪರಿಚಿತವಾದರೂ ಕೂಡ ಭೂಲೋಕದ ಗಂಟು ನಮ್ಮ ಮೇಲೆ ಬೀರುವ ಪ್ರಭಾವವನ್ನು ನಾವು ಹೇಗೆ ತಪ್ಪಿಸಿಕೊಳ್ಳಬಹುದು?

______________________________

______________________________

"ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸೂ ಇರುವದಷ್ಟೇ" (ಮತ್ತಾಯ 6:21) ಇದು ಯೇಸು ಮಾಡುವ ಮನವಿ. ಈ ವಾಕ್ಯದ ತೀವ್ರತೆಯನ್ನು ಗಮನಸಬೇಕಾದರೆ ಇದರ ಹಿಂದಿನ ಎರಡು ವಚನಗಳನ್ನು ನಾವು ನೋಡಬೇಕು. ಅವು ಭೂಲೋಕದಲ್ಲಿ ಗಂಟು ಮಾಡಿಕೊಳ್ಳುವುದು ಮತ್ತು ಪರಲೋಕದಲ್ಲಿ ಗಂಟು ಮಾಡಿಕೊಳ್ಳುವುದರ ವೈರುದ್ಯತೆಯನ್ನು ತೋರಿಸುತ್ತದೆ. ಮೂರು ಮಾತುಗಳು ಭೂಲೋಕವನ್ನು ವಿವರಿಸುತ್ತವೆ. ನುಸಿ ಹಿಡಿಯುವುದು, ಕಿಲುಬು ಹತ್ತಿ ಕೊಳ್ಳುವುದು, ಕಳ್ಳರು ಕನ್ನಾ ಕೊರೆದು ಕದಿಯುವರು (ಮತ್ತಾಯ 6:19), ನಮ್ಮ ಭೂಲೋಕದ ಹಣವು ಎಷ್ಟು ಅಶಾಶ್ವತವಾದದ್ದು ಮತ್ತು ಎಷ್ಟು ಅಸ್ಥಿರವಾದದ್ದು ಎಂದು ಇವು ತೋರಿಸುತ್ತವೆ. ಈ ಲೋಕದ ಹಣವು ಎಷ್ಟು ಬೇಗ ಮಾಯವಾಗುತ್ತದೆ ಎಂದು ಯಾರು ಗ್ರಹಿಸಿಲ್ಲ? ಈ ಲೋಕದಲ್ಲಿ ಎಲ್ಲವೂ



ಕೂಡ ಅಶಾಶ್ವತ ಮತ್ತು ಅಸ್ಥಿರ ಹಾಗೂ ಅಸುರಕ್ಷಿತ; ಅವು ಹಾಳಾಗುವುದಕ್ಕೆ, ನಾಶವಾಗುವುದಕ್ಕೆ. ಕಳ್ಳತನಕ್ಕೆ ಮತ್ತು ಕಳೆದುಹೋಗುವುದಕ್ಕೆ ಸಿದ್ದವಾಗಿವೆ. ಪರಲೋಕವು ಅದಕ್ಕೆ ವಿರುದ್ದವಾಗಿದೆ. ಅದು ಶಾಶ್ವತ ಮತ್ತು ಸ್ಥಿರ, ಹಾಗೂ ಸುರಕ್ಷಿತ; ಹಾಳಾಗದ ಮತ್ತು ನಾಶವಾಗದ ವಿಷಯವಾಗಿದೆ. ಪರಲೋಕದಲ್ಲಿ ಯಾವುದೇ ನಷ್ಟವಿಲ್ಲ.

ನಿಮ್ಮ ಆಸ್ತಿಯನ್ನು ನೋಡಿಕೊಳ್ಳಿರಿ, ನೀವು ಹಲವು ವಸ್ತುಗಳನ್ನು ಹೊಂದಿದ್ದರೂ ಕೂಡ ಈಗ ಅಥವಾ ಮುಂದೆ ಅವುಗಳನ್ನು ಎಸೆಯಬೇಕಾಗುತ್ತದೆ. ಇದಕ್ಕೆ ನಿಮ್ಮ ಚರಾಸ್ತಿ ವಿನಾಯತಿಯನ್ನು ಪಡೆಯಬಹುದು. ಆದರೆ ಬುದ್ದಿವಂತ ಪಾರುಪತ್ಯಗಾರನು ತನ್ನ ಹಣವನ್ನು ಪರಲೋಕದ ನಿಧಿಯಲ್ಲಿ ಬಚ್ಚಿಟ್ಟುಕೊಳ್ಳಬೇಕು. ಇಲ್ಲಿಯ ಹಾಗೆ ಅಲ್ಲಿ ಅದರ ಕುರಿತಾಗಿ ನೀವು ಕಳ್ಳರ, ನುಸಿತ, ಲೂಟಿ ಮಾಡುವವರ ಕುರಿತಾಗಿ ಚಿಂತಿಸುವ ಅಗತ್ಯವಿಲ್ಲ.

ಮತ್ತಾಯ 6:19–21 ರಲ್ಲಿ ಪಾರುಪತ್ಯಗಾರಿಕೆಯ ಒಂದು ಪ್ರಾಮುಖ್ಯವಾದ ವಿಷಯವಿದೆ. ನಿಮ್ಮ ಹಣವು ಎಳೆಯುತ್ತದೆ, ಜಗ್ಗುತ್ತದೆ, ಒತ್ತಾಯಿಸುತ್ತದೆ, ಸೆಳೆಯುತ್ತದೆ, ಬೇಡಿಕೆ ಇಡುತ್ತದೆ, ಆಸೆ ತೋರಿಸುತ್ತದೆ, ಮತ್ತು ನಿಮ್ಮ ಹೃದಯವನ್ನು ನಿಯಂತ್ರಿಸುತ್ತದೆ. ಪ್ರಾಪಂಚಿಕ ಲೋಕದಲ್ಲಿ ನಿಮ್ಮ ಹೃದಯವು ನಿಮ್ಮ ಹಣವನ್ನು ಹಿಂಬಾಲಿಸುತ್ತದೆ. ಆದ್ದರಿಂದ ಹಣವು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ನಾವು ಈ ಲೋಕದ ಅವಶ್ಯಕತೆಗಳ ಮತ್ತು ಲಾಭಗಳ ಕುರಿತಾಗಿ ಯೋಚಿಸುವಾಗ ಪರಲೋಕದ ವಿಚಾರಗಳು ಬಹಳ ಕಷ್ಟವಾದ ವಿಚಾರಗಳಾಗುತ್ತವೆ.

ದೇವರನ್ನು ನಂಬುತ್ತೇವೆ ಎಂದು ಹೇಳಿಕೊಳ್ಳುತ್ತಾ ಲೋಕದ ಹಣವನ್ನು ಸೇರಿಸುವುದು ಕಪಟತನವಾಗಿದೆ. ನಮ್ಮ ಕ್ರಿಯೆಗಳು ನಮ್ಮ ಮಾತಿಗೆ ಸರಿಯಾಗಿರಬೇಕು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಈ ಲೋಕದ ಹಣವನ್ನು ನಾವು ಕಣ್ಣಿನಿಂದ ನೋಡುತ್ತೇವೆ, ಆದರೆ ನಮ್ಮ ಕಾಣಿಕೆಗಳನ್ನು ನಂಬಿಕೆಯಿಂದ ಪರಲೋಕದಲ್ಲಿರುವ ಹಣವಾಗಿ ನೋಡುತ್ತೇವೆ.(2 ಕೊರಿಂಥ 5:7). ಈ ಲೋಕದಲ್ಲಿ ನಾವು ಕೆಲವೊಂದು ಪ್ರಾಯೋಗಿಕವಾದ ವಿಚಾರಗಳ ಕುರಿತಾಗಿ ನಾವು ಆಲೋಚಿಸಬೇಕಾಗುತ್ತದೆ (ಇದರಲ್ಲಿ ನಿವೃತ್ತಿಯ ಜೀವನವು ಕೂಡ ಸೇರಿದೆ) ಅದರೂ ನಾವು ನಮ್ಮ ಮನಸ್ಸಿನಲ್ಲಿ ವಿಶಾಲವಾದ ದೃಷ್ಟಿಯನ್ನು ಹೊಂದಬೇಕಾಗಿರುತ್ತದೆ.

ಇಬ್ರಿಯರಿಗೆ 10:34 ನ್ನು ಓದಿರಿ ಇಲ್ಲಿ ಭೂಲೋಕದ ಹಣಕ್ಕೂ ಮತ್ತು ಪರಲೋಕದ ಹಣಕ್ಕೂ ಪೌಲನು ಯಾವ ಪ್ರಮುಖವಾದ ವ್ಯತ್ಯಾಸವನ್ನು ತೋರಿಸುತ್ತಿದ್ದಾನೆ?

**ಪಾಠ 9** **ಫೆಬ್ರವರಿ24– ಮಾರ್ಚ್ 2**

**ಸೋಮವಾರ** **ಫೆಬ್ರವರಿ 26**

## ದೇವರ ಕೃಪೆಯ ಪಾರುಪತ್ಯಗಾರರು

ಎಫೆಸ 2:8 ಪ್ರಕಾರ ದೇವರಿಂದ ನಮಗೆ ನೀಡಲಾಗಿರುವ ಮತ್ತೊಂದು ವಿಷಯವು ಯಾವುದು?

________________________________________

ಕೃಪೆಯೆಂದರೆ 'ಅರ್ಹತೆಯಿಲ್ಲದ ಸಹಾಯ' ನಿಮಗೆ ಪಡೆಯಲು ಯೋಗ್ಯತೆಯಿಲ್ಲದಿದ್ದರೂ ನೀಡಲಾಗುವ ಬಹುಮಾನ. ಈ ಲೋಕದ ಮೇಲೆ ದೇವರು ತನ್ನ ಕೃಪೆಯನ್ನು ಸುರಿಸಿದ್ದಾನೆ ಮತ್ತು ಅದನ್ನು ನಾವು ಸುಮ್ಮನೆ ನಿರಾಕರಿಸಲು ಸಾಧ್ಯವಿಲ್ಲ. ಆತನ ಕೃಪೆಯು ನಮ್ಮನ್ನು ತಲುಪಿ ನಮ್ಮ ಜೀವನಗಳನ್ನು ಇಂದಿಗೂ ಮತ್ತು ನಿತ್ಯತ್ವಕ್ಕೂ ಬದಲಾಯಿಸುತ್ತದೆ. ಕೃಪೆಯೆಂಬ ಒಂದು ಬಹುಮಾನದಲ್ಲಿ ಇಡೀ ಪರಲೋಕವನ್ನೇ ನಮಗೆ ನೀಡಲಾಗಿದೆ. (2 ಕೊರಿಂಥ 8:9) ಪರಲೋಕದ ದೇವದೂತರು ಕೂಡ ಈ ಅಮೂಲ್ಯವಾದ ಬಹುಮಾನವನ್ನು ನೋಡಿ ಆಶ್ಚರ್ಯಗೊಳ್ಳುತ್ತಾರೆ. (1 ಪೇತ್ರನು 1:12).

ದೇವರು ನಮಗೆ ನೀಡಲಾಗಿರುವ ಎಲ್ಲಾ ಬಹುಮಾನಗಳಲ್ಲಿ ಕ್ರಿಸ್ತನಲ್ಲಿ ನಮಗೆ ನೀಡಲಾಗಿರುವ ಕೃಪೆಯು ಅತ್ಯಂತ ಪ್ರಶಸ್ತವಾಗಿದೆ. ಕೃಪೆಯಿಲ್ಲದೆ ಹೋದರೆ ನಾವು ನಿರೀಕ್ಷೆಯಿಲ್ಲದವರಾಗುತ್ತೇವೆ. ಪಾಪದ ತೀವ್ರತೆಯು ಎಷ್ಟು ತೀಕ್ಷ್ಣವಾಗಿದೆ ಎಂದರೆ ಅದರಿಂದ ತಪ್ಪಿಸಿಕೊಳ್ಳಲು ಮಾನವರಿಗೆ ಅಸಾಧ್ಯವಾಗಿದೆ.ಆಜ್ಞೆಗೆ ನಾವು ತೋರಿಸುವ ವಿಧೆಯತೆಯು ಕೂಡ ನಮ್ಮನ್ನು ಮರಣದಿಂದ ತಪ್ಪಿಸಲು ಸಾಧ್ಯವಿಲ್ಲ. ಹಾಗಾದರೆ ಧರ್ಮಶಾಸ್ತ್ರವು ದೇವರ ವಾಗ್ದಾನಗಳಿಗೆ ವಿರುದ್ಧವೋ? ಹಾಗೆ ಎಂದಿಗೂ ತಿಳುಕೊಳ್ಳಬಾರದು. ಬದುಕಿಸುವದಕ್ಕೆ ಶಕ್ತವಾಗಿರುವ ಧರ್ಮಶಾಸ್ತ್ರವು ಕೊಡಲ್ಪಟ್ಟಿದ್ದರೆ ಸಂದೇಹವಿಲ್ಲದೆ ಕರ್ಮಮಾರ್ಗದಿಂದಲೇ ನೀತಿಯುಂಟಾಗುತ್ತಿತ್ತು. (ಗಲಾತ್ಯ 3:21).



ಯಾವುದೇ ಆಜ್ಞೆಯು ಕೂಡ ನಮ್ಮನ್ನು ಕಾಪಾಡಲು ಸಾಧ್ಯವಿಲ್ಲ. ಅದು ದೇವರ ಆಜ್ಞೆಯಾಗಿದ್ದರೂ ಕೂಡ. ಪೌಲನು ಹೇಳುತ್ತಾನೆ ಅದು ಕೂಡ ನಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ. ನಮಗೆ ರಕ್ಷಣೆಯಾಗುವುದಾದರೆ ಅದು ಕೃಪೆಯಿಂದ ಮಾತ್ರ ಸಾಧ್ಯ.

1 ಪೇತ್ರನು 4:10 ನ್ನು ಓದಿರಿ ಪಾರುಪತ್ಯಗಾರಿಕೆಯು ಕೃಪೆಯ ಜೊತೆಗೆ ಹೇಗೆ ಹೊಂದಿಕೊಂಡಿದೆ?ದೇವರಿಗೆ ಕೊಡುವುದು ಮತ್ತು ಇತರರಿಗೆ ಕೊಡುವುದು ಈ ಕೃಪೆಯನ್ನು ಹೇಗೆ ತೋರಿಸುತ್ತದೆ?

________________________________________

________________________________________

ನಾವು ದೇವರ ಕೃಪೆಯನ್ನು ಹೊಂದಿದ ನಾವು 'ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೆ ಮನೆವಾರ್ತೆಯವರಾಗಿದ್ದು' ಎಂದು ಪೇತ್ರನು ಹೇಳುತ್ತಾನೆ. ದೇವರು ನಮಗೆ ಬಹುಮಾನಗಳನ್ನು ನೀಡಿದ್ದಾನೆ ಅದನ್ನು ಪಡೆದ ನಾವು ಇತರರಿಗೆ ಅವುಗಳನ್ನು ನೀಡಬೇಕಾಗಿದೆ. ಕೃಪೆಯಿಂದ ನಮಗೆ ನೀಡಲಾಗಿರುವ ವಸ್ತುಗಳನ್ನು ನಾವು ನಮ್ಮ ಸ್ವಂತಕ್ಕೆ ಮತ್ತು ನಮ್ಮ ಭೋಗಕ್ಕೆ ಉಪಯೋಗಿಸಿಕೊಳ್ಳದೆ ದೇವರ ಸುವಾರ್ತೆಯ ಉಪಯೋಗಕ್ಕಾಗಿ ಉಪಯೋಗಿಸಬೇಕಾಗಿದೆ. ನಮಗೆ ಉಚಿತವಾಗಿ ನೀಡಲಾಗಿದೆ (ಅದುವೇ ಕೃಪೆಯಾಗಿದೆ) ಅದ್ದರಿಂದ ನಮಗೆ ಸಾಧ್ಯವಾದಷ್ಟು ಇತರರಿಗೆ ನೀಡಬೇಕು.

ದೇವರು ನಿಮಗೆ ನೀಡಿರುವ ಎಲ್ಲಾ ವಿಷಯಗಳನ್ನು ಕುರಿತಾಗಿ ಆಲೋಚಿಸಿರಿ. ನಿಮಗೆ ಉಚಿತವಾಗಿ ನೀಡಲಾಗಿರುವ ವಿಷಯಗಳಲ್ಲಿ ನೀವು ಹೇಗೆ ಒಳ್ಳೆಯ ಪಾರುಪತ್ಯಗಾರರಾಗಿರಬಹುದು?

**ಪಾಠ 9** **ಫೆಬ್ರವರಿ24– ಮಾರ್ಚ್ 2**

**ಮಂಗಳವಾರ** **ಫೆಬ್ರವರಿ 27**

## ನಮ್ಮ ಶ್ರೇಷ್ಠವಾದ ಕಾಣಿಕೆ

ಲೂಕ 7:37–47 ನ್ನು ಓದಿರಿ ದೇವರಿಗೆ ನೀಡುವ ಕಾಣಿಕೆಯ ಸರಿಯಾದ ಉದ್ದೇಶ ಯಾವುದು ಎಂದು ಈ ವಚನವು ಹೇಳುತ್ತದೆ?

ಮರಿಯಳು ಕೋಣೆಯೊಳಗೆ ಪ್ರವೇಶಿಸಿದಳು ಯೇಸುವು ಮೇಜಿನ ಮೇಲೆ ಒರಗಿರುವುದನ್ನು ಕಂಡಳು. ಅವಳು ಬೆಲೆಬಾಳುವ ಸುಂಗಂಧ ತೈಲದ ಭರಣಿಯನ್ನು ತೆಗೆದು ಆತನ ಪಾದಗಳಿಗೆ ತೈಲವನ್ನು ಹಚ್ಚಿದಳು. ಅವಳ ಕ್ರಿಯೆಯು ಸರಿಯಾದದ್ದು ಎಂದು ಅಕೆಗೆ ಅನಿಸಲಿಲ್ಲ, ಯಾಕೆಂದರೆ ಆಕೆಯ ಜೀವನ ಸರಿಯಾಗಿರಲಿಲ್ಲ.

ಆದರೆ ಮರಿಯಳು ದೆವ್ವಗಳಿಂದ ಬಿಡಿಸಲ್ಪಟ್ಟಿದ್ದಳು. (ಲೂಕ 8:2). ಆದರೆ ಲಾಜರನ ಪುನರುತ್ಥಾನವನ್ನು ನೋಡಿದ ಮೇಲೆ ಅವಳು ಕೃತಜ್ಞತೆಯಿಂದ ತುಂಬಿಹೋದಳು. ಬೆಲೆಬಾಳುವ ಸುಂಗಂಧ ತೈಲದ ಭರಣಿಯು ಆಕೆಯ ಶ್ರೇಷ್ಠವಾದ ಆಸ್ತಿಯಾಗಿತ್ತು. ಅದನ್ನು ಕ್ರಿಸ್ತನಗೆ ನೀಡುವುದರ ಮೂಲಕ ತನ್ನ ಕೃತಜ್ಞತೆಯನ್ನು ಆಕೆಯು ತೋರಿಸಿದಳು.

ನಮ್ಮ ಕಾಣಿಕೆಗಳನ್ನು ಅರ್ಪಿಸುವಾಗ ನಮ್ಮ ಉದ್ದೇಶಗಳು ಹೇಗಿರಬೇಕು ಎಂದು ಈ ಸನ್ನಿವೇಶವು ನಮಗೆ ಒಳ್ಳೆಯ ಪಾಠವನ್ನು ಕಲಿಸುತ್ತದೆ. ಕೃತಜ್ಞತೆಯನ್ನು ಬಿಟ್ಟರೆ ದೇವರ ಪ್ರಶಸ್ತವಾದ ಕೃಪೆಗೆ ಬದಲಾಗಿ ನಾವು ಕೊಡಲು ನಮ್ಮ ಬಳಿಯಲ್ಲಿ ಏನದೆ? ಆತನ ಉದಾರತನ ನಮ್ಮನ್ನು ಕೊಡುವುದಕ್ಕೆ ಪ್ರೇರಣೆಯನ್ನು ನೀಡುತ್ತದೆ. ಅದನ್ನು ನಾವು ಸಮಯ, ತಲಾಂತು ಮತ್ತು ದೇಹಗಳನ್ನು ಕೃತಜ್ಞತೆಯಿಂದ ಜೋಡಿಸಿದಾಗ ಅದು ಅರ್ಥಪೂರ್ಣವಾದ ಕಾಣಿಕೆಯಾಗುತ್ತದೆ.

ವಿಮೋಚನೆಕಾಂಡ 34:26 ಯಾಜಕಕಾಂಡ 22:19–24, ಮತ್ತು ಅರಣ್ಯಕಾಂಡ 18:29.ನ್ನು ಓದಿರಿ. ಈ ದಿನಗಳಿಗೆ ಹೋಲಿಸಿದರೆ ಹಿನ್ನಲೆಯು ವ್ಯತ್ಯಾಸವಾಗಿರಬಹುದು. ಅದರೂ ಕೂಡ ಕಾಣಿಕೆಯ ವಿಚಾರದಲ್ಲಿ ನಾವು ಯಾವ ಪಾಠವನ್ನು ಕಲಿಯಬಹುದು?

ನಮ್ಮ ದೃಷ್ಟಿಯಲ್ಲಿ ನಮ್ಮ ಕಾಣಿಕೆಗಳು ಬಹಳ ಸಣ್ಣದಾಗಿ ಕಾಣಬಹುದು, ಆದರೆ ದೇವರ ದೃಷ್ಟಿಯಲ್ಲಿ ಅವು ಬಹಳ ಪ್ರಶಸ್ತವಾದವುಗಳು. ದೇವರಿಗೆ ಶ್ರೇಷ್ಠವಾದವುಗಳನ್ನು



ನೀಡುವುದರ ಮೂಲಕ ನಮ್ಮ ಜೀವನದಲ್ಲಿ ಆತನಗೆ ಮೊದಲನೇಯ ಸ್ಥಾನವನ್ನು ನಾವು ನೀಡುತ್ತೇವೆ ಎಂದು ನಾವು ತೋರಿಸುವವರಾಗಿದ್ದೇವೆ. ನಾವು ಸಹಾಯವನ್ನು ಹೊಂದಲು ಕಾಣಿಕೆಗಳನ್ನು ನೀಡುವುದಿಲ್ಲ, ಬದಲಿಗೆ, ಯೇಸುಕ್ರಿಸ್ತನಲ್ಲಿ ನಮಗೆ ನೀಡಲಾಗಿರುವ ಬಹುಮಾನಗಳಿಗೆ ಕೃತಜ್ಞತೆಯಾಗಿ ನಾವು ನೀಡುತ್ತೇವೆ.

ಇಡಿ ಆರಾಧನೆ ಮತ್ತು ದಯೆ ಶ್ರೇಷ್ಠವಾದ ಪ್ರೀತಿಯಿಂದ ಪ್ರೇರಣೆಗೊಂಡರೆ ಒಂದು ಸಣ್ಣ ಕಾಣಿಕೆಗೆ ಅದು ನಡೆಸುತ್ತದೆ. ಮನಃಪೂರ್ವಕವಾದ ತ್ಯಾಗ, ದೈವಿಕವಾದ ಸುವಾಸನೆಯಾಗಿ ಆ ಬಹುಮಾನವನ್ನು ಬೆಳೆಬಾಳುವಂತೆ ಮಾಡುತ್ತದೆ. ಆದರೆ, ನಾವು ನಮ್ಮ ವಿಮೋಚಕನ ಕರೆಗೆ ಓಗೊಟ್ಟು ನಮಗಿರುವ ಶ್ರೇಷ್ಠವಾದ ವಸ್ತುಗಳನ್ನು ಆತನಿಗೆ ನೀಡಿದರೂ ಕೂಡ ಅವು ನಮ್ಮ ದೃಷ್ಟಿಯಲ್ಲಿ ಬಹಳ ಸಣ್ಣದಾಗಿ ಮತ್ತು ಬೆಲೆಯಿಲ್ಲದ ವಸ್ತುಗಳಾಗಿ ಕಾಣುತ್ತವೆ. ಆದರೆ ದೇವದೂತರು ಈ ಕಾಣಿಕೆಗಳನ್ನು ತೆಗೆದುಕೊಂಡು ಅವುಗಳನ್ನು ದೇವರ ಮುಂದೆ ಸುವಾಸನೆಭರಿತವಾದ ಅಂಗಿಕಾರವಾಗುವ ಯಜ್ಞವಾಗಿ ದೇವರ ಸಿಂಹಾಸನದ ಮುಂದೆ ಅವುಗಳನ್ನು ಸಮರ್ಪಿಸುತ್ತಾರೆ.' **ಎಲೆನ್ ಜಿ ವೈಟ್ ಟೆಸ್ಟಿಮೊನಸ್ ಫಾರ್ ದಿ ಚರ್ಚ್ ಸಂಪುಟ 3, ಪುಟ 397.**

**ಪಾಠ 9** **ಫೆಬ್ರವರಿ24– ಮಾರ್ಚ್ 2**

**ಬುಧವಾರ** **ಫೆಬ್ರವರಿ 28**

## ಹೃದಯದ ಉದ್ದೇಶಗಳು

ಈ ಹಿಂದಿನ ದಿನದ ಪಾಠದಲ್ಲಿ ವಿಧವೆಯ ಉದಾರವಾದ ಕಾಣಿಕೆಯ ಕುರಿತಾಗಿ ಗಮನಿಸಿದ್ದೇವೆ. ಅದು ಬೇರೆಯವರ ಕಾಣಿಕೆಗಳಿಗೆ ಹೋಲಿಸಿದರೆ ಅದು ಬಹಳ ಅಲ್ಪ ಪ್ರಮಾಣದಲ್ಲಿದ್ದರೂ ಕೂಡ ಅದು ಉದಾರವಗಿತ್ತು ಯಾಕೆಂದರೆ ಅದು ಆಕೆಯ ಸ್ವಭಾವ ಮತ್ತು ಹೃದಯವನ್ನು ತೋರಿಸುತ್ತಿತ್ತು,ಇದರಿಂದ ಯೇಸುವು ಈಕೆಯೋ ತನ್ನ ಬಡತನದಲ್ಲಿಯೂ ತನಗಿದ್ದ ಜೀವನವನ್ನೆಲ್ಲಾ ಕೊಟ್ಟು ಬಿಟ್ಟಳು, ಎಂದು ಹೇಳುವಂತೆ ಮಾಡಿತು. (ಲೂಕ 21:3).

ದೇವರು ಒಬ್ಬನೇ (ಯಾಕೋಬ 4:12) ನಮ್ಮ ಉದ್ದೇಶಗಳನ್ನು ಬಲ್ಲವನಾಗಿದ್ದಾನೆ. (ಜ್ಞಾನೋಕ್ತಿಗಳು 16:2 ಮತ್ತು 1 ಕೊರಿಂಥ 4:5) ಸರಿಯಾದ ಕಾರ್ಯವನ್ನು ಕೆಟ್ಟ ಉದ್ದೇಶದಿಂದ ಮಾಡಬಹುದು. ಹೆಚ್ಚಾಗಿ ಕೊಡಲು ಬಹಳ ವಿಶ್ವಾಸದ

ಅಗತ್ಯವಿಲ್ಲ,ಆದರೆ ಬೇರೆಯವರ ಒಳಿತಿಗಾಗಿ ತ್ಯಾಗದಿಂದ ಕೊಡುವುದು ನಮ್ಮ ಹೃದಯದ ಕುರಿತಾಗಿ ಬಹಳ ಸ್ಪಷ್ಟವಾಗಿ ಹೇಳುತ್ತದೆ.

2 ಕೊರಿಂಥ 8:8–15 ಇಲ್ಲಿ ಕೊಡುವ ಕುರಿತಾಗಿ ಪೌಲನು ಏನು ಹೇಳುತ್ತಾನೆ ಮತ್ತು ಕೊಡುವುದರ ಉದ್ದೇಶವೇನು? ಪಾರುಪತ್ಯಗಾರಿಕೆಯ ಕುರಿತಾಗಿ ಈ ವಚನಗಳಿಂದ ನಾವು ಏನು ಕಲಿಯಬಹುದು?

ಕೊಡುವುದಕ್ಕೆ ಯಾವುದೇ ಉದ್ದೇಶವಿದ್ದರೂ ಕೂಡ ಅದು ಸ್ವಾರ್ಥದಿಂದ ಪರಹಿತಚಿಂತನೆಗೆ ನಮ್ಮನ್ನು ನಡೆಸುತ್ತದೆ. ಸ್ವಾರ್ಥ ಮತ್ತು ಕೊಡುವುದರ ನಡುವಿನ ಹೋರಾಟವು ಮಿಕ್ಕ ಎಲ್ಲಾ ಹೋರಾಟಗಳಿಗಿಂತ ಬಹಳ ಮುಖ್ಯವಾದದ್ದು. ಹಿಂದೆ ದೇವರ ಸೇವೆಗಾಗಿ ಸಮರ್ಪಿತವಾಗಿದ್ದ ಹೃದಯವನ್ನು ಸ್ವಾರ್ಥವು ತಣ್ಣಗಾಗಿಸುತ್ತದೆ. ನಾವು ನಮ್ಮ ಕ್ರೈಸ್ತಿಯ ಅನುಭವದೊಳಗೆ ಸ್ವಾರ್ಥಕ್ಕೆ ಅವಕಾಶ ಮಾಡಿಕೊಟ್ಟಾಗ ಸಮಸ್ಯೆಯು ಶುರುವಾಗುತ್ತದೆ. ಅದು ಕೂಡ ನಾವು ನಮ್ಮ ಸ್ವಾರ್ಥಕ್ಕೆ ಸರಿಯಾದ ಸಮಂಜಸವನ್ನು ಹುಡುಕಿದಾಗ ಮತ್ತು ಅದನ್ನು ಕ್ರಿಸ್ತನ ಹೆಸರಿನಲ್ಲಿ ಮಾಡಿದಾಗ ಸಮಸ್ಯೆ ಆರಂಭವಾಗುತ್ತದೆ.

ಇದರ ಸಾರಾಂಶವು ಒಂದು ಪದದಲ್ಲಿ ಬಂದು ನಿಲ್ಲುತ್ತದೆ ಅದುವೇ ಪ್ರೀತಿ. ಮತ್ತು ಪ್ರೀತಿಯನ್ನು ಸ್ವಯಂ ನಿರಾಕರಣೆ ಇಲ್ಲದೆ, ಒಬ್ಬನ ಸ್ವಂತವನ್ನು ಬಿಟ್ಟುಕೊಡದೆ ಇದನ್ನು ಬೇರೆಯವರ ಒಳಿತಿಗಾಗಿ ಮಾಡದೆ ಪ್ರೀತಿಯನ್ನು ತೋರಿಸಲು ಸಾಧ್ಯವಿಲ್ಲ.

ದೇವರ ಪ್ರೀತಿಯು ನಮ್ಮ ಜೀವನದಲ್ಲಿ ಪ್ರತಿಬಿಂಬಿಸದಿದ್ದರೆ ನಾವು ಕೊಡುವುದರಲ್ಲಿ ದೇವರ ಪ್ರೀತಿಯು ಕಾಣುವುದಿಲ್ಲ. ಸ್ವಾರ್ಥದ ಹೃದಯವು ತನ್ನನ್ನು ಮಾತ್ರ ಪ್ರೀತಿಸಿಕೊಳ್ಳುತ್ತದೆ. ನಾವು ದೇವರನ್ನು (ನಮ್ಮ) ನಿಮ್ಮ ಹೃದಯದಲ್ಲೇ ಸುನ್ನತಿ ಮಾಡಿಕೊಳ್ಳಿರಿ? ಎಂದು ಕೇಳಬೇಕು. (ಧರ್ಮೋಪದೇಶಕಾಂಡ 10:16) ಇದರಿಂದ ನಾವು ಯಾವ ರೀತಿಯಲ್ಲಿ ಪ್ರೀತಿಸಲ್ಪಟ್ಟೆವೋ ಅದೇ ರೀತಿಯಲ್ಲಿ ಪ್ರೀತಿಸಲು ಸಾಧ್ಯವಾಗುತ್ತದೆ.



ಪ್ರೀತಿ, ಎಲ್ಲಾ ನಿಜವಾದ ಲಾಭಗಳಿಗೆ ಆಧಾರವಾಗಿದ್ದು ಕ್ರೈಸ್ತವನ ಎಲ್ಲಾ ಉದಾರತೆಯನ್ನು ತೋರಿಸುತ್ತದೆ. ದೇವರು ನಮಗೆ ತೋರಿಸಿರುವ ಪ್ರೀತಿಯು ನಮ್ಮಲ್ಲಿ ಪ್ರೀತಿಯನ್ನು ತೋರಿಸುವಂತೆ ಮಾಡುತ್ತದೆ, ಮತ್ತು ಇದೇ ಕೊಡುವುದರ ಹಿಂದಿನ ಉದ್ದೇಶವಾಗಿದೆ.

ಯಾವುದಾದರೂ ಹೆಚ್ಚಿನ ಮೊತ್ತವನ್ನು ಪ್ರೀತಿಯ ಕೃತಜ್ಞತೆಯಿಂದ ಕೊಡದೆ ಬದಲಿಗೆ ಕೊಡಬೇಕು ಎಂಬ ಭಾಧ್ಯತೆಯ ಮನೋಭಾವದಲ್ಲಿ ಕೊಟ್ಟರೆ ಅದರ ಪ್ರತಿಫಲ ಏನಾಗಬಹುದು?

**ಪಾಠ 9** **ಫೆಬ್ರವರಿ24– ಮಾರ್ಚ್ 2**

**ಗುರುವಾರ** **ಮಾರ್ಚ್ 1**

## ಕೊಡುವುದರ ಅನುಭವ

ಕ್ರಿಸ್ತನು ದೇವರ ಸ್ವಭಾವವನ್ನು ನಮಗೆ ತಿಳಿಯಪಡಿಸಲು ಈ ಲೋಕಕ್ಕೆ ಬಂದಿದ್ದರೆ, ಈಗ ಒಂದು ವಿಷಯವು ಸ್ಪಷ್ಟವಾಗಬೇಕು: ದೇವರು ನಮ್ಮನ್ನು ಪ್ರೀತಿಸುತ್ತಾನೆ, ಮತ್ತು ಆತನು ನಮ್ಮಿಂದ ಉತ್ತಮವಾದದ್ದನ್ನು ಬಯಸುತ್ತಾನೆ. ಇದನ್ನು ನಮ್ಮ ಒಳಿತಿಗಾಗಿ ಇದನ್ನು ನಮ್ಮಿಂದ ಬಯಸುತ್ತಾನೆ. ಆತನು ನಮ್ಮ ಅನುಕೂಲಕ್ಕೆ ಇದನ್ನು ಮಾಡುತ್ತಾನೆ ಹೊರೆತು ನಮ್ಮ ಅಪಾಯಕ್ಕೆ ಇದನ್ನು ಮಾಡುವುದಿಲ್ಲ. ಇದರಲ್ಲಿ ನಾವು ಉದಾರತೆಯನ್ನು ತೋರಿಸುವುದು ಮತ್ತು ಸಂತೋಷವಾಗಿ ಕೊಡುವುದು ಕೂಡ ಸೇರಿದೆ. ಉದಾರವಾದ ಮತ್ತು ಮುಕ್ತ ಕಾಣಿಕೆಗಳು ಕೊಡುವವರ ನಮ್ಮ ಪ್ರಯೋಜನಕ್ಕೆ ಮತ್ತು ಅದನ್ನು ಪಡೆದುಕೊಳ್ಳುವವರ ಪ್ರಯೋಜನಕ್ಕೆ ಉಪಯೋಗವಾಗುತ್ತವೆ. ಈ ರೀತಿಯಲ್ಲಿ ಕೊಡುವವರು ಮಾತ್ರ ಪಡೆದುಕೊಳ್ಳುವುದಕ್ಕಿಂತ ಕೊಡುವುದು ಎಷ್ಟು ಉತ್ತಮ ಎಂದು ಅರ್ಥ ಮಾಡಿಕೊಳ್ಳುತ್ತಾರೆ.

2 ಕೊರಿಂಥ 9:6,7 ನ್ನು ಕೊಡುವುದರ ಕುರಿತಾಗಿ ಈ ವಚನಗಳು ಯಾವ ಸಾರಾಂಶವನ್ನು ನೀಡುತ್ತವೆ?

ಉದಾರವಾದ ಕಾಣಿಕೆಯನ್ನು ನೀಡುವುದು ವ್ಯಯಕ್ತಿಕ, ಮತ್ತು ಆತ್ಮಿಕವಾಗಿರಬಹುದು ಮತ್ತು ಇರಬೇಕು. ಅದು ನಂಬಿಕೆಯ ಕೆಲಸ, ಕ್ರಿಸ್ತನಲ್ಲಿ ನಮಗೆ ನೀಡಲಾಗಿರುವುದಕ್ಕೆ ಕೃತಜ್ಞತೆಯಾಗಿದೆ.

ನಂಬಿಕೆಯ ಯಾವ ಕೆಲಸದ ಜೊತೆಯಲ್ಲಿ ಆಗುವಂತೆ ಅದು ನಂಬಿಕೆಯನ್ನು ವೃದ್ದಿಗೊಳಿಸುತ್ತದೆ. 'ಕ್ರಿಯೆಗಳಿಲ್ಲದ ನಂಬಿಕೆ ವ್ಯರ್ಥ' (ಯಾಕೋಬ 2:20). ನಮ್ಮ ನಂಬಿಕೆಯನ್ನು ಪ್ರದರ್ಶಿಸುವುದಕ್ಕಿಂತ ನಂಬಿಕೆಯನ್ನು ವೃದ್ದಿಗೋಳಿಸಲು ಬೇರೆ ಉತ್ತಮವಾದ ಮಾರ್ಗವಿಲ್ಲ. ಇದರಿಂದ ನಮ್ಮ ನಂಬಿಕೆಯು ಬೆಳೆಯುತ್ತದೆ. ನಾವು ಉದಾರವಾಗಿ ಮತ್ತು ಉಚಿತವಾಗಿ ಕೊಡುವವದರ ಮೂಲಕ ನಮ್ಮ ಜೀವನದಲ್ಲಿ ಕ್ರಿಸ್ತನ ಸ್ವಭಾವವನ್ನು ತೋರಿಸುವುದಾಗಿದೆ. ದೇವರು ಯಾರು ಎಂದು ನಮ್ಮ ಕ್ರಿಯೆಗಳ ಮೂಲಕ ನಾವು ಅನುಭವಿಸುತ್ತಿದ್ದೇವೆ. ಇದರಿಂದ ದೇವರಲ್ಲಿ ನಮ್ಮ ನಂಬಿಕೆಯು ಬೆಳೆದು, ಯೆಹೋವನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿಆತನನ್ನು ಆಶ್ರಯಿಸಿಕೊಂಡವರು ಎಷ್ಟೋ ಧನ್ಯರು! ಎಂದು ನಾವು ತಿಳಿದುಕೊಳ್ಳುತ್ತೇವೆ.

ಯೇಸುವಿನ ಮುಖದಲ್ಲಿ ಕಾಣುತ್ತಿದ್ದ ಪ್ರಕಾಶವು ಸ್ವಯಂ ತ್ಯಾಗದ ಪ್ರಕಾಶವಾಗಿತ್ತು. ಕಲ್ವಾರಿಯ ಬೆಳಕಿನಲ್ಲಿ ಸ್ವಯಂ ನರಾಕರಣೆಯ ಆಜ್ಞೆಯು ಭೂಲೋಕದ ಮತ್ತು ಪರಲೋಕದ ಪ್ರೀತಿಯ ಆಜ್ಞೆಯಾಗಿದೆ ಎಂದು ನಾವು ತಿಳಿದುಕೊಳ್ಳುತ್ತೇವೆ; ಈ ಪ್ರೀತಿಯು ತನ್ನ ಸ್ವಂತ ಲಾಭವನ್ನು ಯೋಚಿಸುವುದಿಲ್ಲ. ಇದು ದೇವರ ಹೃದಯದಿಂದ ಬರುವುದಾಗಿದೆ. ಮತ್ತು ಯಾರು ಸಮಿಪಿಸಲಾರದ ತೆಜಸ್ಸಿನಲ್ಲಿ ವಾಸಿಸುವಾತನ ಗುಣಗಳನ್ನು ಇದು ಪ್ರದರ್ಶಿಸುತ್ತದೆ. **ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಎಜಸ್ ಪುಟ 20**.

ನೀವು ಕೊಟ್ಟಿರುವ ವಿಷಯದಲ್ಲಿ ಉದಾರವಾಗಿ ಮತ್ತು ಉಚಿತವಾಗಿ ನೀಡುವುದರ ಮೂಲಕ ಹೇಗೆ ನಿಮ್ಮ ವಿಶ್ವಾಸವು ಯಾವ ರೀತಿಯಲ್ಲಿ ಅಭಿವೃದ್ದಿಯನ್ನು ಹೊಂದಿದೆ ?



**ಪಾಠ 9 ಕೃತಜ್ಞತೆಯ ಕಾಣಿಕೆಗಳು ಫೆಬ್ರವರಿ24– ಮಾರ್ಚ್ 2**

**ಶುಕ್ರವಾರ ಮಾರ್ಚ್ 2**

## ಹೆಚ್ಚಿನ ಚಿಂತನೆ :

ಸ್ವಾತಂತ್ರ್ಯದ ಆತ್ಮವು ಪರಲೋಕದ ಅತ್ಮವಾಗಿದೆ.ಸ್ವಾರ್ಥದ ಆತ್ಮವು ಸೈತಾನನ ಅತ್ಮವಾಗಿದೆ. ಕ್ರಿಸ್ತನ ಸ್ವಯಂ ತ್ಯಾಗದ ಪ್ರೀತಿಯನ್ನು ಕಲ್ವಾರಿಯ ಮೇಲೆ ಪ್ರಕಟಿಸಲಾಗಿದೆ. ಆತನು ತನಲ್ಲಿ ಇದ್ದ ಎಲ್ಲವನ್ನೂ ಕೂಡ ನೀಡಿದನು, ಮತ್ತು ಮನುಷ್ಯನನ್ನು ರಕ್ಷಿಸಲು ತನ್ನನ್ನು ತಾನು ಬಲಿಯಾಗಿ ಕೊಟ್ಟನು. ಇಲ್ಲಿ ಉಲ್ಲೇಖಿಸಲಾಗಿರುವ ನಯಮವೆಂದರೆ ಕೊಡುವುದು. ಇದು ಕ್ರೈಸ್ತರ ಜೀವನ ನಿಜವಾದ ಫಲವಾದ ಉದಾರತೆಯನ್ನು ತೋರಿಸುತ್ತದೆ. ಲೋಕದ ನಯಮ ತೆಗೆದುಕೊಳ್ಳುವುದಾಗಿದೆ. ಇದರಿಂದ ಅವರು ಸಂತೋಷವನ್ನು ಬಯಸುತ್ತಾರೆ ಇದಕ್ಕಾಗಿ ಏನನ್ನು ಬೇಕಾದರೂ ಮಾಡುತ್ತಾರೆ ಅದರ ಫಲ ನಾಶ ಮತ್ತು ಮರಣವಾಗಿದೆ. **ಎಲೆನ್ ಜಿ ವೈಟ್ ಅಡ್ವೆಂಟ್ ರಿವ್ಯೂ ಮತ್ತು ಸಬ್ಬತ್ ಹೆರಾಲ್ಡ್ ಅಕ್ಟೋಬರ್ 17, 1882**.

ಚರ್ಚಿಸಬೇಕಾದ ಪ್ರಶ್ನೆಗಳು

1.ಕ್ರಿಸ್ತನ ಆತ್ಮಕ್ಕೆ ವಿರುದ್ದವಾಗಿರುವ ಸ್ವಾರ್ಥದ ಆತ್ಮವು ಏನು ಮಾಡುತ್ತದೆ? ಬಿದ್ದು ಹೋದ ಮಾನವರಿಗೆ ಸಹಜವಾಗಿರುವ ಸ್ವಾರ್ಥದ ಬಲೆಗೆ ಬೀಳದಂತೆ ನಾವು ಯಾವ ರೀತಿಯಲ್ಲಿ ಎಚ್ಚರಿಕೆಯಾಗಿರಬಹುದು?

2.ಪ್ರತಿಯೊಬ್ಬನು ತನ್ನ ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ ದುಃಖದಿಂದಾಗಲಿ ಬಲಾತ್ಕಾರದಿಂದಾಗಲಿ ಯಾರೂ ಕೊಡಬಾರದು; ಯಾಕೆಂದರೆ ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರಿತಿಯುಂಟು. (1 ಕೊರಿಂಥ 9:7) 'ಸಂತೋಷವಾಗಿ' ಎಂಬ ಗ್ರೀಕ್ ಪದವನ್ನು ನಾವು ನೋಡುವಾಗ ಹೊಸ ಒಡಂಬಡಿಕೆಯಲ್ಲಿ ಒಂದೇ ಒಂದು ಬಾರಿ ಬಳಕೆಯಾಗಿದೆ ಮತ್ತು ಇದು ಅಂಗ್ಲ ಭಾಷೆಯ 'ಉಲ್ಲಾಸದ' ಎಂಬ ಅರ್ಥವನ್ನು ನೀಡುತ್ತದೆ. ಇದು ನಾವು ಕೊಡುವ ಉದ್ದೇಶದ ಕುರಿತಾಗಿ ಏನು ಹೇಳುತ್ತದೆ?

3.ಕ್ರಿಸ್ತನಲ್ಲಿ ನಿಮಗೆ ಕೊಡಲ್ಪಟ್ಟಿರುವ ವಿಷಯಗಳ ಪಟ್ಟಿ ಮಾಡಿರಿ. ನೀವು ಬರೆದಿರುವ

ವಿಷಯಗಳ ಕುರಿತಾಗಿ ಪ್ರಾರ್ಥಿಸಿರಿ. ನಮಗೆ ಕೊಡಲಾಗಿರುವ ವಿಷಯಗಳ ಬದಲಿಗೆ ನಾವು ಯಾವ ರೀತಿಯಲ್ಲಿ ಕೊಡಬೇಕು ಎಂದು ಇದು ತಿಳಿಸುತ್ತದೆ? ಅದೇ ಸಮಯದಲ್ಲಿ ಈ ಪಟ್ಟಿಯು ಹೇಗೆ ನಮ್ಮ ಶ್ರೇಷ್ಠವಾದ ಮತ್ತು ಉತ್ತಮವಾದ ಉದ್ದೇಶಗಳು ನಾವು ಏನು ಪಡೆದುಕೊಂಡಿದ್ದೆವೋ  ಅವುಗಳ ಮುಂದೆ ಕ್ಷುಲ್ಲಕವಾಗಿ ಕಾಣುವಂತೆ ಮಾಡುತ್ತದೆ?

4. ನಿಮ್ಮ ಸಭೆಯ ಸಮುದಾಯದಲ್ಲಿ ಯಾರು ಸಹಾಯದ ಅವಶ್ಯಕತೆಯಲ್ಲಿ ಇದ್ದರೋ ಅವರ ಕುರಿತಾಗಿ ಆಲೋಚಿಸಿರಿ. ಅವರ ಕುರಿತಾಗಿ ನೀವು ಏನು ಮಾಡಬಹುದು, ಈ ಸಮಯದಲ್ಲಿ ಅವರಿಗೆ ಹೇಗೆ ನೀವು ಸಹಾಯ ಮಾಡಬಹುದು. ಇದಕ್ಕಾಗಿ ನೀವು ನೋವಿನ ತ್ಯಾಗಗಳನ್ನು ಮಾಡಬೇಕಾಗಿ ಬಂದರೂ ಕೊಡ ನೀವು ಸಿದ್ದರಾಗಿದ್ದಿರಾ?